# 15

# ಹೊಸ ಒಡಂಬಡಿಕೆ

# (8:6-13)

"ಹಳೆ ಹಾಗೂ ಹೊಸ ಒಡಂಬಡಿಕೆಗಳು" ಎಂಬದು ಸಾಧಾರಣ ಹೇಳಿಕೆಯಾಗಿದೆ.[1] ಹಳೆ ಒಡಂಬಡಿಕೆ ಯೆಹೂದ್ಯರಿಗಾದರೆ, ಹೊಸ ಒಡಂಬಡಿಕೆಯು ಕ್ರೈಸ್ತರಿಗಾಗಿ ಎಂಬುದು ಸಾಮಾನ್ಯ ವಿಚಾರವಾಗಿದೆ. "ಒಡಂಬಡಿಕೆ" ಎಂಬುದರಲ್ಲಿ ಸುಂದರವಾದ ಅನುವಾದವನ್ನು ನೀಡಲಾಗಿದೆ (ಒಪ್ಪಂದ). ಇದರ ವಿಚಾರವನ್ನು ನಾವುಗಳು ಅರಿಯದೆ ಇರಬಾರದು. ಅಧ್ಯಾಯ 8ರ ಅಂತ್ಯದಲ್ಲಿ ಬರಹಗಾರನು, "*ಹೊಸ* ಒಡಂಬಡಿಕೆ" ಎಂಬ ವಿಷಯವನ್ನು ಚರ್ಚಿಸಿದ್ದಾನೆ.

## ಒಂದು *ಹೊಸ* ಒಡಂಬಡಿಕೆ

### ಅದು ಒಂದು ಹೊಸ ಒಡಂಬಡಿಕೆ

ಬಹುಶಃ "ಒಡಂಬಡಿಕೆ" ಎಂದು ಮೊಟ್ಟಮೊದಲು ಎಂದು ನಾವು ಒತ್ತಿ ಹೇಳ ಬೇಕಾಗಿದೆ. "ಒಡಂಬಡಿಕೆ" ಎಂದು NASB ಯಲ್ಲಿ ಭಾಷಾಂತರ ಮಾಡಿದ ಪದವನ್ನು "ಒಪ್ಪಂದವೆಂದು" ಹಲವು ಸಾರಿ KJV ಯಲ್ಲಿ ಭಾಷಾಂತರಿಸಲಾಗಿದೆ. ಇವೆರಡು ಪದಗಳನ್ನು ಗ್ರೀಕ್ ಭಾಷೆಯಲ್ಲಿರುವ ಒಂದೇ ಪದದಿಂದ ಭಾಷಾಂತರಿಸಲಾಗಿದೆ, ಬಹುಶಃ "ಒಡಂಬಡಿಕೆ"[2] ಎಂಬುದು ಯೋಗ್ಯವಾಗಿದೆ. ಸತ್ಯವೇದದಲ್ಲಿ "ಹಳೆಯ ಹಾಗೂ ಹೊಸ ಒಡಂಬಡಿಕೆ" ಎಂದು ಬರೆಯಲಾಗಿದೆ (ಇಬ್ರಿಯ 8:13; ನೋಡಿರಿ 8:8; 9:15; 12:24). ಅಥವಾ "ಮೊದಲ ಒಡಂಬಡಿಕೆ" ಹಾಗೂ "ಎರಡನೆಯ ಒಡಂಬಡಿಕೆ" ಎನ್ನಲಾಗಿದೆ (8:7; ನೋಡಿರಿ 9:1, 15, 18).

"ಒಡಂಬಡಿಕೆ" ಎಂಬದು ಸಾಧಾರಣವಾದ ಗ್ರೀಕ್ ಪದವಾಗಿರುವದಿಲ್ಲ (*ಸುಂತಕೆ*) ಆದರೆ ಇಲ್ಲಿ (*ಡಯಥೆಕೆ*) "ಚಿತ್ತೈಸು"[3] ಎಂಬ ಪದ ಬಳಕೆಯಾಗಿದೆ. ಒಡಂಬಡಿಕೆ ಎಂದರೆ "ಕರಾರು" ಎಂದು ತಿಳಿಯುತ್ತೇವೆ. ಇಬ್ಬರ ನಡುವೆಯಾಗುವ "ಒಪ್ಪಂದ" ದೇವರ ಚಿತ್ತವನ್ನು ನಾವು ಒಪ್ಪಿಕೊಳ್ಳುತ್ತೇವೆ, "ದೇವರು ತನ್ನ ವಾಗ್ದಾನದ ಮೇರೆಗೆ ನಮ್ಮನ್ನು ಆಶೀರ್ವದಿಸುವನು ಇದು ಹೊಸ ಒಡಂಬಡಿಕೆಯಾಗಿದೆ." ಮಾನವರ ಕರಾರು ಹಾಗೂ ಒಪ್ಪಂದದಲ್ಲಿ ವಾದಗಳಿರುತ್ತವೆ, ಅವುಗಳು ಒಪ್ಪಂದದ ಮೊದಲೇ ನಡೆಯುತ್ತವೆ. ಹೊಸ ಹಾಗೂ ಹಳೆ ಒಡಂಬಡಿಕೆಯಲ್ಲಿ ಈ ವಿಧವಾದ ವಾದಗಳು ಇರುವದಿಲ್ಲ. ಹಳೆಯ ಒಡಂಬಡಿಕೆಯಲ್ಲಿ, ಇಸ್ರಾಯೇಲ್ಯರು ವಾದವನ್ನಿಡಲು ಅಸಾಧ್ಯವಾಗಿತ್ತು, ಹೊಸ ಒಡಂಬಡಿಕೆಯಲ್ಲಿಯೂ ಸಹ, ನಾವುಗಳು ತರ್ಕಮಾಡುವ ಪ್ರಮೇಯವಿರುವದಿಲ್ಲ. ಹೊಸ ಒಡಂಬಡಿಕೆಯಲ್ಲಿ ಶಾಸನವು ಅಡಕವಾಗಿದೆ (9:16, 17): ಶಾಸನದ ಪ್ರಕಾರ ಲಾಭವನ್ನು ಪಡೆಯಬಹುದೇ ಹೊರತು, ಶಾಸನವನ್ನು ಬದಲಿಸಲು ಸಾಧ್ಯವಿಲ್ಲ.

### ಇದು ಹೊಸದೇ

ಕ್ರಿಸ್ತನ ಒಡಂಬಡಿಕೆಯು ಹೊಸದೇ ಎಂದು ಹೇಳುವ ಅಗತ್ಯವಿದೆ. "ಹೊಸದು" ಅಂದರೆ, ಗುಣಮಟ್ಟದಲ್ಲಿ "ಹೊಸತನ" (*kainos*) ಎಂಬ ಅರ್ಥವಾಗಿದೆ. ಹಳೆಯದಕ್ಕೆ ತದ್ವಿರುದ್ಧವಾದ

ಸ್ವಭಾವ.[4] ಹಳೇ ಒಡಂಬಡಿಕೆಯ ಹೊಸ ಕ್ರಮವಾಗಿರುವದೇ ಅದು ಹೊಸದೇ ಆಗಿರುತ್ತದೆ.

ಯೆರೆಮೀಯ 31:31-34ನೇ ವಾಕ್ಯವನ್ನು ಬರಹಗಾರನು ಉಲ್ಲೇಖಿಸಿರುವನು. ಮತ್ತು ಅದು ದೇವರ ಯೋಜನೆಯ ಹೊಸ ಒಡಂಬಡಿಕೆಯಾಗಿದೆ: "ಇಗೋ ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ್ಯ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು" (8:8; ನೋಡಿರಿ ಯೆರೆಮೀಯ 31:31). ಅರಸನಾದ ಸೊಲೋಮೋನನ ಮರಣದ ನಂತರ ಇಸ್ರಾಯೇಲ್ ಹಾಗೂ ಯೆಹೂದ ಎಂಬ ಎರಡು ರಾಜ್ಯಗಳು ಉಂಟಾದವು. ಈ ಯೆರೆಮೀಯನ ವಾಗ್ದಾನವು, ಸೆರೆಯಾಗಿ ಹೋಗಿದ್ದ ಯೆಹೂದ್ಯರು ಪರಿವರ್ತನೆಗೊಳ್ಳುವ ವಿಚಾರಕ್ಕೆ ಸಂಬಂಧಪಟ್ಟವು ಎಂಬದು ಕೆಲವರ ಅನಿಸಿಕೆ. ಪರಿಣಾಮಗಳು ಏನೇ ಇರಲಿ. ಈ ವಾಗ್ದಾನಗಳು ಹಳೆ ಒಡಬಡಿಕೆಯಲ್ಲಿ ಈಡೇರಲಿಲ್ಲ. ಇದು ಕ್ರಿಸ್ತನಲ್ಲಿ ನೆರವೇರಿದ ಹೊಸ ಒಡಂಬಡಿಕೆ ಎಂದು ಬರಹಗಾರನು ಸ್ಪಷ್ಟಪಡಿಸಿರುವನು.

## ಹೊಸ ಒಡಂಬಡಿಕೆಯ ಲಕ್ಷಣಗಳೇನು

ಅದು ಉತ್ತಮವಾದದ್ದು ಎಂಬದು ಪ್ರಾಥಮಿಕ ಸಂಗತಿಯಾಗಿದೆ (7:22). ಉತ್ತಮ ಏಕೆಂದರೆ ಮಧ್ಯಸ್ತನಾದ ಯೇಸು ಉತ್ತಮನಾಗಿದ್ದಾನೆ (8:6; ಗಲಾತ್ಯ 3:19), ಮತ್ತು ಉತ್ತಮವೇ ಏಕೆಂದರೆ, ಅದು ಉತ್ತಮವಾದ ವಾಗ್ದನಗಳಲ್ಲಿ ಸ್ಥಾಪಿತವಾಗಿದೆ (8:6). ಅದು ಹೊಸದಾಗಿರುವದೇ ಇನ್ನೊಂದು ಲಕ್ಷಣವಾಗಿದೆ. ಅದರಲ್ಲಿ ಇನ್ನೂ ಕೆಲವು ಲಕ್ಷಣಗಳು ಅಡಕವಾಗಿವೆ.

### ದೋಷರಹಿತವಾದ ಒಂದು ಒಡಂಬಡಿಕೆ

ಹಳೆಯ ಒಡಂಬಡಿಕೆಯಂತೆ, ಇದು ದೋಷರಹಿತವಾದ ಹೊಸ ಒಡಂಬಡಿಕೆಯಾಗಿದೆ (8:7) ಅದು ಜನರನ್ನು ನಿತ್ಯವಾದ ಸಂಬಂಧಕ್ಕೆ ತರುತ್ತದೆ. ಅದು ದೋಷರಹಿತವಾಗಿರುವದರಿಂದ, ನಮ್ಮ ದೋಷ ಪರಿಹಾರಕ್ಕೆ ಮಾರ್ಗವನ್ನು ತೋರುತ್ತದೆ.

### ಆತ್ಮೀಕವಾದ ಒಂದು ಒಡಂಬಡಿಕೆ

ಇದು ಆತ್ಮೀಕ ಜನರಿಗಾಗಿ ಉಂಟಾದ, ಆತ್ಮೀಕವಾದ ಒಡಂಬಡಿಕೆಯಾಗಿದೆ (1 ಪೇತ್ರ 2:9, 10). ಇಸ್ರಾಯೇಲ್ಯರ ಉತ್ತರದ ಜನರನ್ನು ಅಶ್ಶೂರ್ಯರು ಸೆರೆಹೊಯ್ದು ದಕ್ಷಿಣದವರು ಸಹ ಸೆರೆಯಾಗುವ ಸಂದರ್ಭದಲ್ಲಿ ಯೆರೆಮೀಯನು ಈ ಪ್ರವಾದನೆಯನ್ನು ಬರೆದನು. ಪವಿತ್ರಾತ್ಮ ಪ್ರೇರಿತನಾದ ಇಬ್ರಿಯ ಬರಹಗಾರನು ತಿಳಿಸಿ, ತಮ್ಮ ಸ್ವ ಸ್ಥಾನಕ್ಕೆ ಹಿಂದರುಗಲಿದ್ದ ಇಸ್ರಾಯೇಲ್ಯರಿಗೂ ಮತ್ತು ಯೆಹೂದ್ಯರಿಗೂ ಈ ಪ್ರವಾದನೆಯು ಸಂಬಂಧ ಪಡದೆ, ಅಬ್ರಹಾಮನಿಂದಾದ ಆತ್ಮೀಯ ಜನಾಂಗಕ್ಕೆ ಸಂಬಂಧಪಟ್ಟದ್ದು ಎಂದು ವಿವರಿಸಿರುವನು - ಅದು ಕ್ರೈಸ್ತರಿಗಾಗಿಯೇ ಬರೆಯಲಾಗಿದೆ (ನೋಡಿರಿ ಗಲಾತ್ಯ 3:29).

### ಅದು ಆಂತರಿಕವಾದ ಒಡಂಬಡಿಕೆಯಾಗಿದೆ

ಅದು ಆಂತರಿಕವಾದ ಒಂದು ಒಡಂಬಡಿಕೆಯಾಗಿರುತ್ತದೆ (ಇಬ್ರಿಯ 8:10). ಹೃದಯದ ಧರ್ಮದ ಕುರಿತು ಯೆರೆಮೀಯನು ತಿಳಿಸಿದನು (ಯೆರೆಮೀಯ 4:4, 14; 5:24; 24:7; 29:13). ಯೋಶಿಯನ ಕ್ರಾಂತಿಯ ನಿಮಿತ್ತ, ಬಾಹಿರವಾದ ಅನೇಕ ಆಚಾರಗಳು ಪ್ರಸ್ತುತವಾದರೂ, ಅವರು ತಮ್ಮ ಹೃದಯಗಳನ್ನು ಅಲಕ್ಷ್ಯಮಾಡಿದ್ದರು. ಹೊಸ ಒಡಂಬಡಿಕೆಯನ್ನು ಅಂತರಾಳದಲ್ಲಿ ಬರೆಯಬೇಕಿತ್ತು (ನೋಡಿರಿ 2 ಕೊರಿಂಥ 3).

**ಅದು ವೈಯಕ್ತಿಕವಾದ ಒಡಂಬಡಿಕೆಯಾಗಿತ್ತು**

ಅದು ವೈಯಕ್ತಿಕವಾದ ಒಡಂಬಡಿಕೆ 8:10ರಲ್ಲಿರುವ ವಾಗ್ದಾನವನ್ನು ವಿಮೋಚನಕಾಂಡ 34:7ರಲ್ಲಿ ಇಸ್ರಾಯೇಲ್ಯರಿಗೆ ನೀಡಲಾಗಿತ್ತು. ಅದನ್ನು ಯೆರೆಮೀಯ 31:31-34ರಲ್ಲಿ, ಪುನಃ ಸ್ಥಾಪನೆ ಮಾಡಲಾಯಿತು. ಆದರೆ ಅವಿಧೇಯತೆಯ ನಿಮಿತ್ತ ಅದನ್ನು ನಿರ್ಲಕ್ಷ್ಯ ಮಾಡಲಾಯಿತು (ಇಬ್ರಿಯ 8:9ಬಿ). ಕಡೇಯದಾಗಿ ಅದನ್ನು ಕ್ರೈಸ್ತತ್ವದಲ್ಲಿ ಗ್ರಹಿಸಬೇಕಾಯಿತು (ಪ್ರಕಟನೆ 21:7). 8:11ರ ವಾಕ್ಯದ ಪ್ರಕಾರ, "ಕರ್ತನ ಜ್ಞಾನವನ್ನು" ಪಡೆಯಿರಿ ಎಂಬ ಹೇಳಿಕೆಯಲ್ಲಿ, ಅದರ ವೈಯಕ್ತಿಕ ಗುಣಲಕ್ಷಣಗಳನ್ನು ತಿಳಿಸಲಾಗಿದೆ. "ಜ್ಞಾನವನ್ನು ಪಡೆಯಿರಿ" ಎಂಬದರಲ್ಲಿ ಕರ್ತನೊಂದಿಗೆ ವೈಯಕ್ತಿಕವಾದ, ಆಂತರಿಕವಾದ ಸಂಬಂಧವನ್ನು ಪಡೆಯಿರಿ ಎಂಬ ತತ್ವವಿದೆ.[5]

**ಅದು ತಿಳುವಳಿಕೆಯುಳ್ಳ ಒಡಂಬಡಿಕೆಯಾಗಿದೆ**

ಅದು ತಿಳುವಳಿಕೆಯುಳ್ಳ ಒಡಂಬಡಿಕೆಯಾಗಿದೆ (ವಚನ 11). ಜನರ ಅಂತರಾಳ ದಲ್ಲಿದ್ದ ಅಜ್ಞಾನದ ಕುರಿತು ಯೆರೆಮೀಯನು ಬೇಸರಪಟ್ಟನು (ಯೆರೆಮಿಾಯ 3:15; 10:14; 51:17) ಹೊಸ ಒಡಂಬಡಿಕೆಯ ಪ್ರಕಾರ "ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ಜ್ಞಾನವನ್ನು ಪಡೆಯುವರು. ಆ ವಾಗ್ದಾನದ ನೆರವೇರಿಕೆಯನ್ನು ಹಳೆ ಒಡಂಬಡಿಕೆಯಲ್ಲಿ ಕಾಣುವದಿಲ್ಲ." ಯಾಕೆಂದರೆ ಯೆಹೂದ್ಯರ ಹಸುಗೂಸುಗಳು ಮಾತ್ರ, ಜನ್ಮದ ಹಕ್ಕಿನಿಂದಲೂ, ಹಾಗೂ ಸುನ್ನತಿಯ ಮೂಲಕವಾಗಿಯೂ ಒಡಂಬಡಿಕೆಯ ಸಂಬಂಧಕ್ಕೆ ಒಳಪಡುತ್ತಿದ್ದರು, ಅವರು ಹುಟ್ಟಿದ ಕೆಲವೇ ದಿನಗಳಲ್ಲಿ ದೇವ ಜನರಾಗುತ್ತಿದ್ದರು; ನಂತರದಲ್ಲಿ ಅವರು ದೇವಜ್ಞಾನವನ್ನು ಅರಿಯುವ ಬೋಧನೆಯನ್ನು ಹೊಂದುತ್ತಿದ್ದರು. ಕ್ರೈಸ್ತತ್ವದಲ್ಲಿ, ಸಿದ್ಧಿಗೆ ಬಂದು ಕ್ರೈಸ್ತನು ಯಾವದು ಸರಿ, ಅಥವಾ ಯಾವುದು ತಪ್ಪು ಎಂಬ ಅರಿವನ್ನು ಹೊಂದಿದ ನಂತರ, ಈ ಒಡಂಬಡಿಕೆಯ ಅನ್ಯೋನ್ಯತೆಗೆ ಸೇರಿಕೊಳ್ಳುತ್ತಿದ್ದನು. ಆ ಅನ್ಯೋನ್ಯತೆಗೆ, ಸೇರುವ *ಮೊದಲು* ಅವನಿಗೆ ಬೋಧಿಸಲ್ಪಡುತ್ತದೆ (ಮತ್ತಾಯ 28:18-20; ಮಾರ್ಕ 16:15, 16; ಯೋಹಾನ 1:12, 13; 6:44, 45).

**ಅದು ವಿಮೋಚನೆ ನೀಡುವ ಒಡಂಬಡಿಕೆಯಾಗಿದೆ**

ಅದು ವಿಮೋಚನೆ ನೀಡುವ ಒಡಂಬಡಿಕೆಯಾಗಿದೆ (ಇಬ್ರಿಯ 8:12). ಹಳೆ ಒಡಂಬಡಿಕೆಯು ಪಾಪಕ್ಷಮೆಯ ಬಗ್ಗೆ ಮಾತಾಡಿದರೂ, ಅದು ತಾತ್ಕಾಲಿಕವಾದ ಪಾಪಕ್ಷಮೆಯಾಗಿತ್ತು (10:3, 4). ಆದ್ದರಿಂದ ಅದಕ್ಕೆ ದೋಷರಹಿತವಾದ ಯಜ್ಞದ ಅಗತ್ಯತೆ ಉಂಟಾಯಿತು (ನೋಡಿರಿ 9:15). ಹೊಸ ಒಡಂಬಡಿಕೆಯಲ್ಲಿ ಮಾತ್ರ ದೇವರು, "ಅವರ ಪಾಪಗಳನ್ನು ಅವರ ದುಷ್ಕೃತ್ಯಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳು ತ್ತಾನೆ" (10:17).

**ಅದು ಬಾಳಿಕೆ ಹೊಂದಿರುವ ಒಡಂಬಡಿಕೆಯಾಗಿದೆ**

ಅದನ್ನು ಹಳೆಯ ಒಡಂಬಡಿಕೆಗೆ ಹೋಲಿಸುವದಾದರೆ, ಬಾಳಿಕೆಹೊಂದಿರುವ ನಿತ್ಯ ವಾಗಿರುವ, ಒಡಂಬಡಿಕೆಯಾಗಿದೆ (8:13). ಪ್ರಸ್ತುತವಾಗಿರುವ ಒಡಂಬಡಿಕೆಯು, ಇಬ್ರಿಯ ಬರಹಗಾರರ ಸಮಯದಲ್ಲಿ ಇದ್ದ ಹಳೆ ಒಡಂಬಡಿಕೆಗಿಂತಲೂ, ಹಳೆಯದಾಗಿದೆ. ಅದರ ಅಸ್ತಿತ್ವದ ಸಮಯ ಬಹಳವಾಗಿದ್ದರೂ, ಅದು ಹೊಸ ಅಸ್ತಿತ್ವದಲ್ಲಿಯೇ ಇರುತ್ತದೆ. ಅದು ಇಂದಿಗೂ, ನಾಳೆಗೂ, ಹಾಗೂ ಕರ್ತನ ದಿನದವರೆಗೂ, ದೇವರು ದಯ ಪಾಲಿಸಿರುವ ಅದ್ಭು ತವಾದ ಒಡಂಬಡಿಕೆಯಾಗಿದೆ.

## *ನಿನಗಾಗಿ* ಇರುವ ಒಂದು ಒಡಂಬಡಿಕೆಯಾಗಿದೆ

ಮತ್ತಾಯನಿಂದ, ಪ್ರಕಟನೆಯವರೆಗೂ ಇರುವ ವಾಕ್ಯಭಾಗಗಳನ್ನು ನಾವು ಹೊಸ ಒಡಂಬಡಿಕೆ ಎಂದು ಕರೆಯುತ್ತೇವೆ. ಆದರೆ ಅದರ ನಿಯಮಗಳನ್ನು ಅನುಸರಿಸಿ, ಕರ್ತನ ಅನ್ಯೋನ್ಯತೆಯ ಸಂಬಂಧಕ್ಕೆ ಸೇರದೆ ಹೋದರೆ, ಅದು ನಮಗೆ ಹೊಸ ಒಡಂಬಡಿಕೆಯಾಗುವದಿಲ್ಲ. 2 ಕೊರಿಂಥ 3ರ ಪೌಲನ ಹೇಳಿಕೆಯಂತೆ, ಅದು ಹಾಳೆಯಲ್ಲಿ ಬರೆದಿರುವ ವಾಕ್ಯವಾಗಿಯೇ ಉಳಿಯದೆ, ನಮ್ಮ ಹೃದಯಗಳಲ್ಲಿ ಬರೆಯುವಾಗ ಅದು ಹೊಸ ಒಡಂಬಡಿಕೆಯಾಗುತ್ತದೆ (ನೋಡಿರಿ ವಚನ 3).

ಕೆಲವು ಬಾರಿ ನೀನು ಕ್ರೈಸ್ತನಾಗಿದ್ದಿಯೋ? ಎಂಬ ಪ್ರಶ್ನೆಯಿಂದ ಪಾಠವನ್ನು ಅಂತ್ಯಗೊಳಿಸುತ್ತೇವೆ. ಆದರೆ, ನೀನು ದೇವರ ಅನ್ಯೋನ್ಯತೆಯ ಸಂಬಂಧಕ್ಕೆ ಸೇರಿದ್ದಿಯೇ? ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಆತನು ನಿನ್ನನ್ನು ಆಶೀರ್ವದಿಸಲು ಮುಂದಾಗಿದ್ದಾನೆ, ಸ್ವೀಕಾರವು ನಿನ್ನ ನಿರ್ಧಾರವಾಗಿರುತ್ತದೆ.

---

ಟಿಪ್ಪಣಿಗಳು

[1]ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಉಪಾಯವನ್ನು ಬಳಸಿರಿ. [2]ಇಬ್ರಿಯ 9:16, 17 "ಒಪ್ಪಂದ" ಎಂಬುದು Neil R. Lightfoot ರವರವಾದವಾಗಿದೆ. [3]The word "primarily signifies a disposition of property by will or otherwise" (W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* [Nashville: Thomas Nelson Publishers, 1985], 134). [4]Ibid., 430-31. [5]John Willis, *My Servants the Prophets,* vol. 3 (Abilene, Tex.: Biblical Research Press, 1972), 74.